ಗ್ರಾಮ ಲೆಕ್ಕಿಗರು ಸುಳ್ಳು ಖಾತೆ ಮಾಡುತ್ತಿರುವ ಬಗ್ಗೆ

318 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗರು ಖಾತೆ ಬದಲಾವಣೆಯಲ್ಲಿ ಸುಳ್ಳು ಖಾತೆಗಳನ್ನು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಹೊಸ ಕಾನೂನು ತರಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

1) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

2) ಭೂ ಕಂದಾಯ ಕಾಯಿದೆ 1964ರ ಕಲಂ 136 ಮತ್ತು ಭೂಕಂದಾಯ ನಿಯಮ 1966ರ ರೂಲ್ 63ರಿಂದ 70ರಡಿಯಲ್ಲಿ ಖಾತೆ ಬದಲಾವಣೆ ಮಾಡುವಾಗ ಅಥವಾ ನಿಯಮಾವಳಿಗಳನ್ನು ಬಿಟ್ಟು ಮಾಡಿದರೆ ಅದನ್ನು ತಡೆಗಟ್ಟುವ ಮತ್ತು ತೊಡದು ಹಾಕುವ ವಿಧಿ ವಿಧಾನಗಳು ಸ್ಪಷ್ಟವಾಗಿದೆ.

ಆದರೂ ಸಹ ಇದನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಜಿಲ್ಲಾಧಿಕಾರಿಗಳಿಗೆ ಹಕ್ಕು ಕೊಡುವ ತಿದ್ದುಪಡಿಗಳನ್ನು ಕಲಂ 136ಕ್ಕೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಈ ಹಲವಾರು ಸುತ್ತೋಲೆಗಳ ಮೂಲಕ ಸುಳ್ಳು ಖಾತೆಗಳನ್ನು ಮಾಡದ ರೀತಿಯಲ್ಲಿ ಸರ್ಕಾರದಿಂದ ಫೀಲ್ಡ ಆಫೀಸರುಗಳಿಗೆ ಆದೇಶಗಳು ಜಾರಿಯಾಗವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇದು ಇತ್ತೀಚೆಗೆ ನಾಲ್ಕೈದು ವರ್ಷದಿಂದ ಸ್ವಲ್ಪ ಜಾಸ್ತಿಯಾಗಿದೆ. ಯಾರದೋ ಖಾತೆ ಯಾರದೋ ಹೆಸರಿಗೆ ಮಾಡುವುದು. ಅಥವಾ ಯಾರದೇ ಪಹಣಿಯನ್ನು ಯಾರದೋ ಹೆಸರಿಗೆ ಬರೆಯುವುದು. ಹೀಗೆಲ್ಲಾ ಮಾಡುತ್ತಿದ್ದಾರೆ. ನಮ್ಮ ಗಮನಕ್ಕೆ ಎಲ್ಲೆಲ್ಲಿ ಬಂದಿದೆ ಅಲ್ಲೆಲ್ಲಾ ಅವರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಎನಕ್ವೆರಿಗೆ ಆರ್ಡರ್ ಮಾಡಿದ್ದೇವೆ. ಬರೀ ಸಸ್ಪೆಂಡ್ ಮಾಡುವುದು ಮತ್ತೆ ಆರು ತಿಂಗಳ ನಂತರ ಅವರನ್ನು ರೀ-ಇನಸ್ಟೇಟ್ ಮಾಡುವುದು it has become a mockery now. ಇದು ನನ್ನದೊಂದೇ ಇಲಾಖೆಯಲ್ಲಿ ಇಲ್ಲ. ಎಲ್ಲಾ ಇಲಾಖೆಯಲ್ಲಿ ಆಗುತ್ತಿದೆ. ಆರು ತಿಂಗಳು ಅವನಿಗೆ ಸಂಬಳ ಕೊಡುವುದಿಲ್ಲ. ಆರು ತಿಂಗಳೊಳಗೆ ಏನಕ್ವೊಯರಿ ಆಗುವುದಿಲ್ಲ. ಇದು ಒಂದು ಒಂದೂವರೆ ವರ್ಷ ತೆಗೆದುಕೊಳ್ಳುತ್ತದೆ. ಅಷ್ಟರವರೆಗೆ ಎಲ್ಲಾ ಮರೆತು ಹೋಗಿರುತ್ತದೆ. ಬುದ್ದಿವಂತರಿದ್ದವರು ಮ್ಯಾನ್ಯುಪಲೇಟ್ ಮಾಡಿ 2-3-5 ವರ್ಷ ಮುಂದೆ ಹಾಕಿಸುಕೊಳ್ಳತ್ತಿದ್ದಾರೆ. ಇದನ್ನೆಲ್ಲಾ ಯೋಚನೆ ಮಾಡಿ ಸೆಕ್ಷನ್ 135ಕ್ಕೆ ಒಂದು ಅಮೆಂಡಮೆಂಟೆ ತಂದು ಯಾರಿಗೆ ಅನ್ಯಾಯವಾಗುತ್ತದೆ ಅವರೇ ನೇರವಾಗಿ ಈ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾಕೆ ಕ್ರಿಮಿನಲ್ ಕೇಸ್ ಹಾಕಬಾರದು, ಏಕೆ ನಾವು ಪ್ರಾವಿಷನ್ ಮಾಡಲುಬಾರದು ಎಂದು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಈಗ ಏನಾಗಿದೆ ಡಿಸ್ಟ್ರಿಕ್ಟ್‌ವೈಸ್ ಈ ವಿಲೇಜ್

ಅಕೌಂಟೆಂಟ್‌ರವರನ್ನು ನೇಮಕ ಮಾಡುತ್ತಿದ್ದೇವೆ. ಅವರನ್ನು ಆ ಜಿಲ್ಲೆಯಿಂದ ಹೊರಗಡೆ ಕಳುಹಿಸುವ ಹಾಗಿಲ್ಲ. ಬೇರೆ ಕೆಲಸಕ್ಕೂ ಕೂಡ ಅವರನ್ನು ನೇಮಿಸುವುದಕ್ಕೆ ಆಗುತ್ತಿಲ್ಲ. ಅದುದರಿಂದ ನಾವು ಅವರಿಗೆ ಎಸ್.ಡಿ.ಸಿ.ಗೂ ಇವರಿಗೂ ಇಂಟರ್‌ಚೇಂಜ್ ಮಾಡುವುದಕ್ಕೆ ಸಾಧ್ಯವೇ ಎಂದು ನಾವು ಈಗಾಗಲೇ ಕಾನೂನು ಇಲಾಖೆಯವರೊಂದಿಗೆ ಸಮಾಲೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ನಾನು ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂಬ ಭರವಸೆ ಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಮೊನ್ನೆ ತಾವು ನಗರಸಭೆ ಪುರಸಭೆಗೆ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಏನಾದರೂ ಖಾತೆ ಬದಲಾವಣೆ ಮಾಡಬೇಕಾದರೆ ಅದನ್ನು ಆಫೀಸ್ ಲೇವಲನಲ್ಲೇ ಸರಿ ಮಾಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. ಅರಟಿಸಿಯನ್ನು ವಿಲೇಜ್ ಅಕೌಂಟೆಂಟಗಳು ಬೇರೆಯವರ ಹೆಸರಿಗೆ ಬದಲಾವಣೆ ಮಾಡಿದರೆ ತಹಸೀಲ್ದಾರ ಲೇವಲನಲ್ಲಿ ಬದಲಾವಣೆ ಮಾಡತಕ್ಕಂಥ ಒಂದು ವ್ಯವಸ್ಥೆ ತಾವು ತರಬೇಕು. ಆರ್.ಟಿ.ಸಿ. ಬದಲಾವಣೆ ಮಾಡಿದರೆ ನಾವು ನೇರ ಎ.ಸಿ. ಕೋರ್ಟಿಗೆ ಹೋಗಬೇಕು. ಏಕೆಂದರೆ ಮೊನ್ನೆ ಒಂದು ಕೇಸ್ ಆಗಿದೆ. ಅವನು ಬದುಕಿದ್ದಾನೆ. ಸತ್ತುಹೋಗಿದ್ದಾನೆಂದು ಬೇರೆಯವರ ಹೆಸರಿಗೆ ಪಾವತಿ ಖಾತೆ ಮಾಡಿದ್ದಾರೆ. ಯಾವ ಮಟ್ಟದ ಬೆಳವಣಿಗೆ ಆಗಿದೆ ಎಂದರೆ ಅದು ಹೇಳಲಿಕ್ಕೆ ಅಸಾಧ್ಯವಾಗಿದೆ. ನಾನು ಇನ್ನು ಬದುಕಿದ್ದೇನಪ್ಪಾ ನಾನು ಸತ್ತುಹೋಗಿದ್ದೇನೆಂದು ನೀವು ಬೇರೆಯವರ ಹೆಸರಿಗೆ ಖಾತೆ ಮಾಡಿದ್ದೀರಿ ಇದು ಹೇಗೆ? ನಾನು ಇನ್ನು ಬದುಕಿದ್ದೇನೆ ಇನ್ನೂ ಸತ್ತಿಲ್ಲ ಎಂದು ಎ.ಸಿ. ಹತ್ತಿರ ಹೋಗಿ ಪ್ರಮಾಣೀಕರಿಸಬೇಕು.

Sri R.L. JALAPPA : I am sorry for the affairs of the Department. But I cannot help it. I am one with him. ತಹಸೀಲ್ದಾರಿಗೆ ಅಧಿಕಾರ ಕೊಡಲು ಸಾಧ್ಯವೇ ಎಂಬುದನ್ನು ನಾನು ಪರೀಕ್ಷೆ ಮಾಡಿ I will take some action.

ಕಡೂರು ತಾಲ್ಲೂಕಿನ ತೆಂಗಿನ ಮರಗಳಿಗೆ ಕಪ್ಪು ತಲೆಹುಳು ರೋಗ

321 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡೂರು ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪುತಲೆ ಹುಳುವಿನ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಡೂರು ತಾಲ್ಲೂಕು ಶಿಗಟೆಗೆರೆ ಮತ್ತು ಯಾಗತಿ ಹೋಬಳಿಗಳಲ್ಲಿ ಅಣಬೆ ರೋಗ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಈ) ಕಡೂರು ತಾಲ್ಲೂಕಿನಲ್ಲಿ ಎಷ್ಟು ಮರಗಳಿಗೆ ಈ ರೋಗ ತಗುಲಿದೆ;

ಉ) ಈ ರೋಗದಿಂದ ಹಾನಿಯುಂಟಾಗಿರುವ ರೈತರಿಗೆ ಸರ್ಕಾರದಿಂದ ಪರಿಹಾರ ಕೊಡುವಿರಾ?